# ನತ್ತಿನ ಮತ್ತು..!

## *ಚೆಂದದ ಮುಖಕೆ ಮೂಗುತಿ ಭಾರವೇ!*

**ಯುವತಿಯರಲ್ಲಿ ಮೂಗುತಿ ಟ್ರೆಂಡ್ ಮತ್ತೆ ಮರುಕಳಿಸಿದೆ. ಆದು ಈಗ ಕೇವಲ ಸಂಪ್ರದಾಯದ ಪ್ರತೀಕವಾಗಿ ಅಲ್ಲ, ಫ್ಯಾಷನೆಬಲ್ ಹಾಗೂ ಟ್ರೆಂಡಿ ಲುಕ್‌ಗಾಗಿ..!**

**ಸುಶೀಲಾ ಡೋಣೂರ**

ಮೊನ್ನೆ ಮೊನ್ನೆವರೆಗೂ ಮೂಗುತಿ ಎಂದರೆ ಸಾಕು 'ಹೋಗಮ್ಮ, ಗೌರಮ್ಮನ ತರಾ ಮೂಗುತಿ ಎಲ್ಲಾ ಯಾರ್ ಹಾಕ್ಕೊಂತಾರೆ' ಅಂತ ಮೂಗು ಮುರಿಯುತ್ತಿದ್ದ ಕಾಲೇಜು ಕನ್ಯೆಯರೂ ಇದೀಗ 'ಸಾನಿಯಾ ನೋಸ್ ರಿಂಗ್' ಎಂದೊಡನೇ ಅಕ್ಕರೆಯಿಂದ ಮೂಗಿಗೇರಿಸಿಕೊಳ್ಳುತ್ತಿದ್ದಾರೆ.

ಹೌದು, ಮೂಗುತಿ ಅಥವಾ ನತ್ತು ಇಂದಿನ ಫ್ಯಾಷನ್ ಲೋಕವನ್ನಾಳುತ್ತಿರುವ ಹೊಸ ಟ್ರೆಂಡ್. ಕಾಲೇಜು ಹುಡುಗಿಯರನ್ನು ಮಾತ್ರವಲ್ಲ, ಉದ್ಯೋಗ ನಿರತ ಮಹಿಳೆಯರನ್ನೂ, ಗೃಹಿಣಿಯರನ್ನೂ ಬಿಡದಂತೆ ಎಲ್ಲರನ್ನೂ ತನ್ನ ಮೋಹದ ತೆಕ್ಕೆಗೆ ಎಳೆದುಕೊಂಡಿದೆ ಈ ರಿಂಗ್.

ಹಾಗೆ ನೋಡಿದರೆ ಮೂಗುತಿಧಾರಿಣಿ ಸಾನಿಯಾ ನೋಸ್‌ರಿಂಗ್‌ಗೆ ಮರುಜನ್ಮ ಕೊಟ್ಟವರೆಂದೇ ಹೇಳಬಹುದು. ಮೂಗಿಗೆ ರಿಂಗ್ ಧರಿಸುವುದು ಹಳೇ ಪದ್ಧತಿ ಎಂದುಕೊಂಡವರೆಲ್ಲ ಸಾನಿಯಾಳ ಮೂಗಿನಲ್ಲಿ ರಿಂಗ್ ನೋಡಿ ದಂಗಾದರು. ಅದೆಷ್ಟೊ ಜನ ಆ ರಿಂಗ್ ನೋಡುವುದಕ್ಕಾಗಿಯೇ ಸಾನಿಯಾ ಆಟ ವೀಕ್ಷಿಸುತ್ತಿದ್ದರು ಎನ್ನುವುದು ಸುಮ್ಮನೆ ಮಾತಲ್ಲ.

ಅಂತೆಯೇ ಹಳೇ ಫ್ಯಾಷನ್ ಎಂದು ಹಿಂದೆ ಸರಿದಿದ್ದ ಮೂಗುತಿಗಳೆಲ್ಲ ಈಗ ಮತ್ತೆ ನ್ಯೂ ಲುಕ್, ನೂತನ ಟ್ರೆಂಡ್‌ನೊಂದಿಗೆ ಶೋಕೇಸ್‌ನ ಅಗ್ರ ಪಂಥಿಯಲ್ಲಿ ಬಂದು ಕುಳಿತಿವೆ. ಹಾಗಂತ ಇದನ್ನು ಕೇವಲ್ ಫ್ಯಾಷನ್ ಅಂದು ಬಿಡುವಂತಿಲ್ಲ. ಸಾಂಪ್ರದಾಯಿಕ ಮೂಗುತಿಗೆ ಇರುವ ಗಾಂಭೀರ್ಯ ಹಾಗೂ ನವಯುಗದ ಫ್ಯಾಷನ್ ಎರಡನ್ನೂ ಇದು ಮೈಗೂಡಿಸಿಕೊಂಡಿದೆ.

ಸಾಮಾನ್ಯವಾಗಿ ಇದನ್ನು ಯುವತಿಯ ಮೂಗಿನ ಎಡಭಾಗದಲ್ಲಿ ಚುಚ್ಚಲಾಗುತ್ತದೆ. ಏಕೆಂದರೆ ಇದು ಸ್ತ್ರೀಯರ ಸಂತಾನೋತ್ಪತ್ತಿ ಅಂಗಗಳೊಂದಿಗೆ ಸಂಬಂಧ ಹೊಂದಿದ್ದು, ಇದರಿಂದ ಹೆರಿಗೆ ಸುಗಮವಾಗುತ್ತದೆ ಹಾಗೂ ಮುಟ್ಟಿನ ನೋವು ಕಡಿಮೆಯಾಗುತ್ತದೆ ಎಂಬ ನಂಬಿಕೆಯೂ ಇದೆ.

ಆದರೆ ವಿದೇಶಿ ಮಹಿಳೆಯರು ರಿಂಗನ್ನು ಮೇಲ್ತುಟಿಯ ಮೇಲೆ, ಮೂಗಿನ ನಡುವೆ, ಗದ್ದದ ಮೇಲೆ, ನಾಲಿಗೆ, ಹೊಕ್ಕಳ ಮೇಲೆ ಹೀಗೆ ಎಲ್ಲೆಂದರಲ್ಲಿ ಚುಚ್ಚಿಕೊಳ್ಳುತ್ತಾರೆ.

ನೋಸ್ ರಿಂಗ್‌ಗಳಲ್ಲಿ ಅನೇಕ ವಿಧಗಳು ಬಂದಿವೆ. ಚಿಕ್ಕದಾದ ಹರಳಿನೊಂದಿಗೆ ಚಿನ್ನದ ರಿಂಗ್, ಹರಳಿಲ್ಲದ ಪ್ಲೇನ್ ಚಿನ್ನದ ರಿಂಗು, ಬೆಳ್ಳಿ ಹರಳಿನ ರಿಂಗ್, ಸಾಲು ಹರಳುಗಳ ರಿಂಗ್, ಪ್ಲಾಟಿನಂ, ಸ್ಟೀಲ್‌ಗಳಲ್ಲಿಯೂ ರಿಂಗ್‌ಗಳು ಲಭ್ಯ. ಪುಟ್ಟದಾದ ಡೈಮಂಡ್ ನತ್ತು, ಬರೀ ಚಿನ್ನದ ಪುಟ್ಟ ಮೂಗುತಿ, ಹರಳಿರುವ ಪುಟಾಣಿ ನತ್ತು ಮೂಗಿನ ಮೇಲೆ ಹೊಳೆದರೆ ಹುಡುಗಿಯ ಮುಖದ ಕಳೆಯೇ ಚಂದ.

ಸಾಲು ಚಿನ್ನದ ಗುಂಡುಗಳು, ಸಾಲು ಹರಳುಗಳುಳ್ಳ ನೋಸ್‌ರಿಂಗ್ ಮದುವೆಯಂತಹ ಸಮಾರಂಭಗಳಲ್ಲಿ ಹಾಕಿದರೆ ಮಾತ್ರ ಚೆನ್ನ. ಅದು ತುಸು ಭಾರವಾಗಿರುವುದರಿಂದ ದಿನದ ಬಳಕೆಗೆ ಅನುಕೂಲವೂ ಅಲ್ಲ, ಸೂಕ್ತವೂ ಅಲ್ಲ.

### ಮೂಗು ಚುಚ್ಚುವಾಗ...

ಅಂತೂ ಫ್ಯಾಷನ್ ಎಂದೋ, ಸಂಪ್ರದಾಯವೆಂದೋ ಒಟ್ಟಿನಲ್ಲಿ ನೀವೂ ಮೂಗಿಗೆ ಸೂಜಿ ಸೋಕಿಸುವ ಗೋಜಿಗೆ ಹೋದಿರೆಂದ ಮೇಲೆ ಮೂಗಿನ ಬಗ್ಗೆ ಒಂದಷ್ಟು ಕಾಳಜಿ ವಹಿಸುವುದೂ ಅಗತ್ಯವಿದೆ.

ಇಲ್ಲಿವೆ ಕೆಲವು ಟಿಪ್ಸ್

- ಮೂಗು ಚುಚ್ಚುವುದಕ್ಕೂ ಒಂದು ಕ್ರಮವಿದೆ. ಹೇಗೆಂದರೆ ಹಾಗೆ ಚುಚ್ಚಿದರೆ ಅಂದ ಕೆಡುವುದರ ಜೊತೆಗೆ ಮುಜುಗರಕ್ಕೂ ಕಾರಣವಾಗುತ್ತದೆ. ಆದ್ದರಿಂದ ನುರಿತ ಚಿನ್ನದ ಅಂಗಡಿಯವರಿಂದ ಚುಚ್ಚಿಸಿಕೊಳ್ಳುವುದು ಒಳ್ಳೆಯದು. ಇತ್ತೀಚೆಗೆ ಕೆಲವು ಕ್ಲಿನಿಕ್‌ಗಳಲ್ಲೂ ಈ ವ್ಯವಸ್ಥೆಯನ್ನು ಏರ್ಪಡಿಸಲಾಗಿದೆ.
- ಚಿನ್ನ ಅಥವಾ ಟೆಟಾನಿಯಂನಿಂದ ಚುಚ್ಚಿದರೆ ಬೇಗ ಗುಣವಾಗುತ್ತದೆ. ಅಲ್ಲದೇ ಸೋಂಕು ತಗುಲುವ ಸಾಧ್ಯತೆಯೂ ಕಡಿಮೆ.
- ಮೂಗು ಚುಚ್ಚಿಕೊಂಡ ನಂತರ ಕೃತಕ ರಿಂಗುಗಳನ್ನು ಬಳಸಬೇಡಿ. ಇದರಿಂದ ತುರಿಕೆ ಅಥವಾ ಸೋಂಕು ಕಾಣಿಸಿಕೊಳ್ಳುವ ಸಾಧ್ಯತೆ ಇದೆ.
- ಮೂಗು ಚುಚ್ಚಿಕೊಂಡ ನಂತರ ಕನಿಷ್ಠ ಆರು ತಿಂಗಳು ಅದನ್ನು ಬದಲಿಸುವ ಗೋಜಿಗೆ ಹೋಗುವುದು ಬೇಡ.

ಅಷ್ಟಕ್ಕೂ ಕೆಲವು ಕ್ಲಿನಿಕ್‌ಗಳಲ್ಲಿ ಗನ್‌ಶಾಟ್ ಮಾದರಿಯಿಂದ ಮೂಗು ಚುಚ್ಚುವ ಕ್ರಮ ಇತ್ತೀಚೆಗೆ ಜನಪ್ರಿಯಗೊಳ್ಳುತ್ತಿದೆ. ಇದರಿಂದ ನಿಮಗೆ ನೋವಿನ ಅನುಭವವೇ ಆಗುವುದಿಲ್ಲ. ಆದರೂ ನಿಮಗೆ ಮೂಗು ಚುಚ್ಚಿಕೊಳ್ಳುವ ಮನಸ್ಸಿಲ್ಲ ಎಂದಾದರೆ ಅದಕ್ಕೂ ಉಪಾಯವಿದೆ. ಚಿನ್ನ, ಬೆಳ್ಳಿ, ಪ್ಲಾಟಿನಂ ಹಾಗೂ ಸ್ಟೀಲ್‌ನಲ್ಲಿ ಕ್ಲಿಪ್ಪಿಂಗ್ ನೋಸ್‌ರಿಂಗ್‌ಗಳು ಲಭ್ಯ. ಮೂಗಿಗೆ ಕೇವಲ ಅದನ್ನು ಪ್ರೆಸ್ ಮಾಡಿಕೊಂಡರೆ ಸಾಕು. ನೀವೂ ಸಾನಿಯಾಳಂತೆಯೇ (ಅಂದುಕೊಂಡು) ಮಿಂಚಬಹುದು!

